**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 339
ಸದಸ್ಯರ ಹೆಸರು : ಶ್ರೀ ಕೆ. ಎ ತಿಪ್ಪೇಸ್ವಾಮಿ
ಉತ್ತರಿಸುವ ದಿನಾಂಕ : 11.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂ-ಕಂದಾಯ ಕಾಯ್ದೆ 1964ರ ಕಲಂ 94 ಸಿ ಮತ್ತು 94 ಸಿಸಿ ರಡಿಯಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು, ಮತ್ತು ಇದುವರೆಗೂ ಇತ್ಯರ್ಥಪಡಿಸಿರುವ ಪ್ರಕರಣಗಳ ಹಾಗೂ ಬಾಕಿಯಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಅಕ್ರಮ-ಸಕ್ರಮ ಅಡಿಯಲ್ಲಿ ಸಲ್ಲಿಸಿದ ಸಾವಿರಾರು ಅರ್ಜಿಗಳನ್ನು ವಿನಾಕಾರಣ ತಿರಸ್ಕೃತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು (ಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ಜಮೀನುಗಳಲ್ಲಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕ್ರಮವಾಗಿ ನಮೂನೆ-50, 53 ಮತ್ತು 57ರಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಈ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 45 ಎಲ್.ಜಿ.ಪಿ. 2023, ದಿನಾಂಕ: 01.12.2023ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108 (ಎಫ್) ರನ್ವಯ ಅರ್ಜಿದಾರನು ಈ ಕೆಳಕಂಡ ಅರ್ಹತೆಯನ್ನು ಹೊಂದಿರತಕ್ಕದ್ದು.<br><br>• ಅನಧಿಕೃತವಾಗಿ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ 18 ವರ್ಷವಾಗಿರಬೇಕು;<br>• ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು;<br>• ಅವನು ಖುದ್ದಾಗಿ ಸಾಗುವಳಿ ಮಾಡುತ್ತಿರಬೇಕು ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಭೂಮಿಯನ್ನು ಹೊಂದುವುದು ಮತ್ತು ಪಡೆಯುವುದರಿಂದ ನಿಷಿದ್ಧನಾಗತಕ್ಕದ್ದಲ್ಲ; |
| ಇ) | ರಾಜ್ಯದಲ್ಲಿ ಅಕ್ರಮ-ಸಕ್ರಮದ ನಮೂನೆ-53 ಮತ್ತು 57 ಅರ್ಜಿಗಳ ವಿಲೇವಾರಿಯಲ್ಲಿ ಅನಗತ್ಯ ವಿಳಂಬವಾಗಲು ಕಾರಣಗಳು ಯಾವುವು; ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಬಗರ್‌ಹುಕುಂ ಸಮಿತಿಗಳನ್ನು ರಚಿಸಲಾಗಿದೆಯೇ; (ಪೂರ್ಣ ವಿವರ ನೀಡುವುದು) | |
| ಈ) | ರಾಜ್ಯದಲ್ಲಿ ಅಕ್ರಮ-ಸಕ್ರಮ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ವಿಲೇವಾರಿ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯ ತನ್ನ ಆದೇಶದಲ್ಲಿ ನೀಡಿರುವ ಮಾನದಂಡಗಳು ಯಾವುವು: ಈ ಮಾನದಂಡಗಳನ್ನು ರಾಜ್ಯ ಸರ್ಕಾರ ಪಾಲಿಸುತ್ತಿದೆಯೇ: (ಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| | | • ನಮೂನೆ-50 ಮತ್ತು 53ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು ಹದಿನಾಲ್ಕನೇ ಏಪ್ರಿಲ್ 1990ರ ದಿನಕ್ಕೆ ಕಡೆಯಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆಯಿಲ್ಲದ ಅವಧಿಯ ನಿರಂತರ ಭೂಮಿಯ ಅನಧಿಕೃತ ಅಧಿಭೋಗನಾಗಿರಬೇಕು.<br>• ನಮೂನೆ-57ರಲ್ಲಿ ಅರ್ಜಿಸಲ್ಲಿಸುವಾಗ 2005ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆಯಿಲ್ಲದ ಅವಧಿಯವರೆಗೆ ನಿರಂತರ ಅರ್ಜಿಸಲ್ಲಿಸಿದ ಅರ್ಜಿದಾರರು ಅನಧಿಕೃತ ಅಧಿಭೋಗನಾಗಿರಬೇಕು.<br>• ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆಯಿರತಕ್ಕದ್ದಲ್ಲ.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108 (ಐ)ರಲ್ಲಿ ಉಲ್ಲೇಖಿಸಿರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 71ರನ್ವಯ ವಿಶೇಷ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಜಮೀನುಗಳು ಮತ್ತು ದೇವರಕಾಡು, ಉರ್ದುವೆ, ಗುಂಡುತೋಪು, ಕೆರೆಯ ತಳಪಾಯ, ಫೋಟ್ ಖರಾಬ್, ಹಳ್ಳ, ಸ್ಮಶಾನಗಳ ಜಮೀನುಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.<br><br>ಸದರಿ ನಿಯಮಗಳು ಹಾಗೂ ಸುತ್ತೋಲೆಯಲ್ಲಿ ತಿಳಿಸಿರುವ ಮಾನದಂಡಗಳನ್ನು ಪೂರೈಸದ ಹಾಗೂ ಅರಣ್ಯ ಜಮೀನುಗಳು, ಕುಮ್ಕಿ, ಕೆರೆ , ಕಟ್ಟೆ, ಕುಂಟೆ ಹಾಗೂ ಇತರೆ ಜಲಮೂಲ ಜಲಕಾಯ ಜಮೀನುಗಳನ್ನು ಮಂಜೂರು ಮಾಡಲು ಸಲ್ಲಿಸಿರುವ ಅನರ್ಹ ಅರ್ಜಿಗಳನ್ನು ತಿರಸ್ಕರಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108ಸಿ, 108ಸಿಸಿ ಹಾಗೂ 108ಸಿಸಿಸಿ ರಡಿ ಜಿಲ್ಲಾಧಿಕಾರಿಯವರು ಅಧಿಕಾರವನ್ನು ಹೊಂದಿರುತ್ತಾರೆ.<br><br>ವಿಧಾನ ಸಭಾ ಕ್ಷೇತ್ರವಾರು ರಚಿಸಿರುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಆರ್‌ಡಿ 69 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ-1 (LCQ 339)

| ಕ್ರಮ ಸಂಖ್ಯೆ | ಜಿಲ್ಲೆ | 94 ಸಿ | | | 94 ಸಿಸಿ | | |
|---|---|---|---|---|---|---|---|
| | | ಸ್ವೀಕೃತಿ | ಒಟ್ಟು ಇತ್ಯರ್ಥ ಪಡಿಸಿರುವ ಅರ್ಜಿ | ಬಾಕಿ | ಸ್ವೀಕೃತಿ | ಒಟ್ಟು ಇತ್ಯರ್ಥ ಪಡಿಸಿರುವ ಅರ್ಜಿ | ಬಾಕಿ |
| 1 | ಬೆಂಗಳೂರು ನಗರ | 0 | 0 | 0 | 62865 | 57949 | 4916 |
| 2 | ಬೆಂಗಳೂರು ಗ್ರಾಮಾಂತರ | 18342 | 18255 | 87 | 14269 | 14233 | 36 |
| 3 | ತುಮಕೂರು | 11906 | 11906 | 0 | 4202 | 4202 | 0 |
| 4 | ಚಿಕ್ಕಬಳ್ಳಾಪುರ | 10568 | 9862 | 706 | 2236 | 2151 | 85 |
| 5 | ಕೋಲಾರ | 2175 | 2171 | 4 | 5799 | 5776 | 23 |
| 6 | ಚಿತ್ರದುರ್ಗ | 8102 | 8102 | 0 | 5667 | 5667 | 0 |
| 7 | ದಾವಣಗೆರೆ | 12908 | 12147 | 761 | 12908 | 1327 | 11581 |
| 8 | ರಾಮನಗರ | 4122 | 3881 | 241 | 459 | 459 | 0 |
| 9 | ಶಿವಮೊಗ್ಗ | 85301 | 82560 | 2741 | 23945 | 23289 | 656 |
| 10 | ಮೈಸೂರು | 8123 | 7898 | 225 | 1059 | 1052 | 7 |
| 11 | ಮಂಡ್ಯ | 3695 | 3688 | 7 | 2172 | 2172 | 0 |
| 12 | ಚಾಮರಾಜನಗರ | 1477 | 1477 | 0 | 113 | 113 | 0 |
| 13 | ದಕ್ಷಿಣ ಕನ್ನಡ | 127020 | 121986 | 5034 | 16726 | 16704 | 22 |
| 14 | ಚಿಕ್ಕಮಗಳೂರು | 65658 | 55730 | 9928 | 2465 | 1743 | 722 |
| 15 | ಹಾಸನ | 40824 | 38997 | 1827 | 1561 | 1521 | 40 |
| 16 | ಕೊಡಗು | 22397 | 21710 | 687 | 2734 | 2607 | 127 |
| 17 | ಉಡುಪಿ | 38506 | 35130 | 3376 | 11045 | 9996 | 1049 |
| 18 | ಬೆಳಗಾವಿ | 51133 | 50829 | 304 | 13938 | 12113 | 1825 |
| 19 | ಗದಗ | 1833 | 1833 | 0 | 1411 | 1411 | 0 |
| 20 | ಧಾರವಾಡ | 15485 | 15485 | 0 | 2487 | 2487 | 0 |
| 21 | ಬಾಗಲಕೋಟೆ | 3458 | 3458 | 0 | 3229 | 3229 | 0 |
| 22 | ಹಾವೇರಿ | 14156 | 14156 | 0 | 843 | 843 | 0 |
| 23 | ಉತ್ತರ ಕನ್ನಡ | 1313 | 1159 | 154 | 455 | 372 | 83 |
| 24 | ವಿಜಯಪುರ | 707 | 707 | 0 | 122 | 122 | 0 |
| 25 | ಕಲಬುರಗಿ | 14561 | 14561 | 0 | 1515 | 1515 | 0 |
| 26 | ಬೀದರ | 16586 | 16586 | 0 | 700 | 700 | 0 |
| 27 | ಯಾದಗಿರಿ | 6121 | 6121 | 0 | 879 | 879 | 0 |
| 28 | ರಾಯಚೂರು | 10158 | 9101 | 1057 | 1140 | 1014 | 126 |
| 29 | ಕೊಪ್ಪಳ | 18130 | 17982 | 148 | 986 | 986 | 0 |
| 30 | ವಿಜಯನಗರ | 5271 | 5271 | 0 | 3187 | 3187 | 0 |
| 31 | ಬಳ್ಳಾರಿ | 2381 | 1908 | 473 | 2296 | 1095 | 1201 |
| ಒಟ್ಟು | | **622417** | **594657** | **27760** | **203413** | **180914** | **22499** |